# ಕರ್ನಾಟಕ ವಿಧಾನ ಪರಿಷತ್ತು.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 244
2. ಸದಸ್ಯರ ಹೆಸರು : ಮುನಿರಾಜುಗೌಡ ಪಿ.ಎಂ.
3. ಉತ್ತರಿಸುವ ದಿನಾಂಕ : 14.12.2021
4. ಉತ್ತರಿಸುವ ಸಚಿವರು : ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯದಲ್ಲಿರುವ ಒಟ್ಟು ಸಕ್ಕರೆ ಕಾರ್ಖಾನೆಗಳೆಷ್ಟು (ಜಿಲ್ಲಾವಾರು ಕಾರ್ಖಾನೆಗಳ ಹೆಸರಿನೊಂದಿಗೆ ವಿವರ ನೀಡುವುದು)</td><td rowspan="2">ರಾಜ್ಯದಲ್ಲಿ ಒಟ್ಟು 88 ನೋಂದಾಯಿತ ಸಕ್ಕರೆ ಕಾರ್ಖಾನೆಗಳಿದ್ದು, ಇವುಗಳ ಪೈಕಿ 65 ಸಕ್ಕರೆ ಕಾರ್ಖಾನೆಗಳು ಕಾರ್ಯನಿರತವಾಗಿವೆ. ವಲಯವಾರು ವಿವರಗಳು ಈ ಕೆಳಕಂಡಂತೆ ಇರುತ್ತವೆ.
<table>
<tr><th>ಕ್ರ.ಸಂ.</th><th>ವಲಯ</th><th>ಕಾರ್ಯನಿರತ</th><th>ಸ್ಥಗಿತ</th><th>ಸಮಾಪನೆ</th><th>ಒಟ್ಟು</th></tr>
<tr><td>1</td><td>ಸಾರ್ವಜನಿಕ ವಲಯ</td><td>–</td><td>02</td><td>–</td><td>02</td></tr>
<tr><td>2</td><td>ಜಂಟಿ ವಲಯ</td><td>–</td><td>–</td><td>01</td><td>01</td></tr>
<tr><td>3</td><td>ಸಹಕಾರಿ ವಲಯ</td><td>13</td><td>05</td><td>04</td><td>22</td></tr>
<tr><td>4</td><td>ಸಹಕಾರಿ ವಲಯ (ಗುತ್ತಿಗೆ)</td><td>08</td><td>–</td><td>–</td><td>08</td></tr>
<tr><td>5</td><td>ಖಾಸಗಿ ವಲಯ</td><td>44</td><td>11</td><td>–</td><td>55</td></tr>
<tr><td colspan="2">ಒಟ್ಟು</td><td>65</td><td>18</td><td>05</td><td>88</td></tr>
</table>
ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ 65 ಸಕ್ಕರೆ ಕಾರ್ಖಾನೆಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.</td></tr>
<tr><td>(ಆ)</td><td>ಇವುಗಳ ಪೈಕಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಸಕ್ಕರೆ ಕಾರ್ಖಾನೆಗಳು ಎಷ್ಟು; ಅವು ಯಾವುವು; (ಜಿಲ್ಲಾವಾರು ಕಾರ್ಖಾನೆಗಳ ಹೆಸರಿನೊಂದಿಗೆ ವಿವರ ನೀಡುವುದು)</td></tr>
<tr><td>(ಇ)</td><td>ಸಕ್ಕರೆ ಕಾರ್ಖಾನೆಗಳಲ್ಲಿ ಕೆಲಸ ಕಾರ್ಯನಿರ್ವಹಿಸುತ್ತಿರು ಕಾರ್ಮಿಕರಿಗೆ ವೇತನವನ್ನು ವೇತನವನ್ನು ಸರ್ಕಾರದಿಂದ ನಿಗದಿಪಡಿಸಲಾಗಿದೆಯೇ;</td><td>ಸರ್ಕಾರದ ಆದೇಶ ಸಂಖ್ಯೆ:ಎಲ್‌ಡಿ/85/ಎಲ್‌ಡಬ್ಲ್ಯೂಎ/2014, ದಿನಾಂಕ:18.03.2016 ರನ್ವಯ ರಾಜ್ಯದ ಎಲ್ಲಾ ಸಕ್ಕರೆ ಉದ್ದಿಮೆಗಳಿಗೆ ಅನ್ವಯಿಸುವಂತೆ ತ್ರಿಪಕ್ಷೀಯ ವೇತನ ಸಮಿತಿ ಶಿಫಾರಸ್ಸುಗಳನ್ವಯ ಸಕ್ಕರೆ ಉದ್ದಿಮೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ವೇತನ ಮತ್ತು ಇತರೆ ಸೌಲಭ್ಯಗಳನ್ನು ಒದಗಿಸಬೇಕಾಗಿರುತ್ತದೆ.</td></tr>
<tr><td>(ಈ)</td><td>ಹಾಗಿದ್ದಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಹಲವಾರು ಕಾರ್ಖಾನೆಗಳಲ್ಲಿ ಕಾರ್ಮಿಕರಿಗೆ ನಿಗದಿತ ವೇತನ ಪಾವತಿ ಮಾಡದಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬಂದಿದೆ.</td></tr>
</table>

......2

**(ಉ)** ಬಂದಿದ್ದಲ್ಲಿ, ಕಾರ್ಮಿಕರಿಗೆ ನಿಗದಿತ ವೇತನ ಪಾವತಿಸದೇ ಸರ್ಕಾರದ ಆದೇಶವನ್ನು ಉಲ್ಲಂಘಿಸುತ್ತಿರುವ ಸಕ್ಕರೆ ಕಾರ್ಖಾನೆಗಳು ಯಾವುವು; ಈ ಕಾರ್ಖಾನೆಗಳ ವಿರುದ್ದ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು)

ತ್ರಿಪಕ್ಷೀಯ ವೇತನ ಸಮಿತಿಯ ಶಿಫಾರಸ್ಸುಗಳನ್ವಯ ವೇತನ ಪಾವತಿ ಮಾಡದಿರುವ ಸಕ್ಕರೆ ಕಾರ್ಖಾನೆಗಳ ವಿರುದ್ಧ ಕೈಗಾರಿಕಾ ವಿವಾದ ಕಾಯ್ದೆ 1947ರ ಕಲಂ 33 ಸಿ(1) ರಡಿ ವಸೂಲಾತಿಗಾಗಿ ಕಾರ್ಮಿಕರು ಸಕ್ಷಮ ಪ್ರಾಧಿಕಾರಗಳ ಮುಂದೆ ಅರ್ಜಿ ಸಲ್ಲಿಸಬೇಕಾಗಿರುತ್ತದೆ. ಅಂತಹ ಪ್ರಕರಣಗಳಲ್ಲಿ ಕಾರ್ಮಿಕ ಇಲಾಖೆಯ ಸಕ್ಷಮ ಪ್ರಾಧಿಕಾರಗಳು ತೆಗೆದುಕೊಂಡ ಕ್ರಮಗಳ ವಿವರಗಳು ಈ ಕೆಳಕಂಡಂತಿವೆ.

1. ಮೆ: ರೇಣುಕಾ ಶುಗರ್ಸ್ ಲಿ. ರಾಯಬಾಗ ಸಂಸ್ಥೆಯ ಕಾರ್ಮಿಕ ಸಂಘದವರು ಕೈಗಾರಿಕಾ ವಿವಾದ ಕಾಯ್ದೆ 1947 ರ ಕಲಂ 33 ಸಿ(1) ರಡಿ ವಸೂಲಾತಿಗಾಗಿ ಕೋರಿದ್ದು, ಈಗಾಗಲೇ ದಿನಾಂಕ 21/03/2021 ರಂದು ರೂ.2,94,89,192.41 ಹಿಂಬಾಕಿ ವೇತನವನ್ನು ವಸೂಲು ಮಾಡಿ ಕೊಡುವಂತೆ ಮಾನ್ಯ ಜಿಲ್ಲಾಧಿಕಾರಿ ಬೆಳಗಾವಿ ಇವರಿಗೆ ಕಳುಹಿಸಲಾಗಿದೆ. ಸದರಿ ಆದೇಶದ ವಿರುದ್ಧ ಆಡಳಿತ ವರ್ಗದವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ 146971/2020 ಅನ್ನು ದಾಖಲಿಸಿದ್ದು ಮಾನ್ಯ ಉಚ್ಚ ನ್ಯಾಯಾಲಯವು ಸದರಿ ಆದೇಶಕ್ಕೆ ತಡೆಯಾಜ್ಞೆ ನೀಡಿರುತ್ತದೆ.
2. ಮೆ:ಶಿರಗುಪ್ಪಿ ಶುಗರ್ಸ್, ಕಾಗವಾಡ ಸಂಸ್ಥೆಗೆ ಸಂಬಂಧಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಗೌರವಾನ್ವಿತ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 115475/2019ರಲ್ಲಿ ತಡೆಯಾಜ್ಞೆ ನೀಡಿರುತ್ತದೆ.
3. ಮೆ:ಜಿ.ಎಂ.ಶುಗರ್ಸ್ ಸಂಗೂರ್ ಸಂಸ್ಥೆಗೆ ಸಂಬಂಧಪಟ್ಟಂತೆ ಕಾರ್ಮಿಕ ಸಂಘದವರು ವಸೂಲಾತಿಗಾಗಿ ಸಲ್ಲಿಸಿದ ಅರ್ಜಿಯ ಮೇಲೆ ವಿಚಾರಣೆ ನಡೆಸಿ ರೂ.78,01,202.00 ಮೊತ್ತದ ವಸೂಲಾತಿಗಾಗಿ ಹಾವೇರಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗಿರುತ್ತದೆ.

ಅಲ್ಲದೆ, ಕಾರ್ಖಾನೆಗಳು, ಬಾಯ್ಲರ್‌ಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆವತಿಯಿಂದ ಕಾರ್ಖಾನೆಗಳ ಕಾಯ್ದೆ, 1948 ರಡಿಯಲ್ಲಿ ನೋಂದಾವಣಿಯಾಗಿರುವ ಈ ಕೆಳಕಂಡ ಸಕ್ಕರೆ ಕಾರ್ಖಾನೆಗಳಲ್ಲಿ ವೇತನ ಸಂದಾಯ ಕಾಯ್ದೆ, 1936 ರಡಿಯಲ್ಲಿ ವೇತನ ಪಾವತಿ ಸಂಬಂಧದ ಉಲ್ಲಂಘನೆಗಳನ್ನು ಗುರುತಿಸಿ ನಿಯಮಾನುಸಾರ ಕ್ರಮವಹಿಸಲಾಗಿದೆ.

| ಕ್ರ. ಸಂ. | ಕಾರ್ಖಾನೆಯ ಹೆಸರು | ಉಪ ಕಾರ್ಮಿಕ ಆಯುಕ್ತರ ಪ್ರಾಧಿಕಾರದ ಮುಂದೆ ಸಲ್ಲಿಸಿರುವ ಕ್ಲೇಮ್ ಅರ್ಜಿ ದಿನಾಂಕ |
|---|---|---|
| 1 | ಮೆ॥ ಮೈಸೂರು ಸಕ್ಕರೆ ಕಂಪನಿ ನಿ., ಮಂಡ್ಯ | 04.02.2019 |
| 2 | ಮೆ॥ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬೆಳಗಾವಿ | 19.03.2020 |
| 3 | ಮೆ॥ ಮಲಪ್ರಭ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬೆಳಗಾವಿ | 06.06.2020 |
| 4 | ಮೆ॥ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬೆಳಗಾವಿ | 16.04.2020 |
| 5 | ಮೆ॥ ಧ್ಯಾನಯೋಗಿ ಶ್ರೀ ಶಿವಕುಮಾರ ಸ್ವಾಮೀಜಿ ಶುಗರ್ಸ್ ಲಿ., ವಿಜಯಪುರ | 22.07.2020 |
| 6 | ಮೆ॥ ಧ್ಯಾನಯೋಗಿ ಶ್ರೀ ಶಿವಕುಮಾರ ಸ್ವಾಮೀಜಿ ಶುಗರ್ಸ್ ಲಿ., ವಿಜಯಪುರ | 18.06.2021 |

ಸಿಐ 346 ಸಿಓಎಫ್ 2021

(ಶಂಕರ ಬ.ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು